ಮನೆಗೆ ಹೋದ ಮೇಲೆ ಅಲ್ಲಿ ಅಣ್ಣನಿಗೆ ಏನಂತ ಹೇಳುವುದು? ಈ ಸ್ಥಿತಿ ತಂದಿಟ್ಟ ಮಗನ ಬಗ್ಗೆ ಸಿಟ್ಟು, ನೋವು, ಸಂಕಟ ಉಮ್ಮಳಿಸಿ ಆ ದುಗುಡ ದುಮ್ಮಾನದಲ್ಲಿ ಮುಳುಗಿಹೋದಳು. ಯಾವಾಗ ನಿದ್ರೆ ಬಂದಿತೊ, ಕಣ್ಣು ಬಿಟ್ಟಾಗ ಬಸ್ಸು ನಿಂತಿತ್ತು. ಊರು ಬಂದಿತ್ತು. ದಡಬಡಿಸಿ ಎದ್ದು ವೀರೂವನ್ನೂ ಏಳಿಸಿ ಬ್ಯಾಗು ತೆಗೆದುಕೊಂಡು ಇಳಿದು ಆಟೊ ಹತ್ತಿದಳು.

ಅಪರೂಪಕ್ಕೆ ಬಂದ ತಂಗಿಯನ್ನು ಭಾಸ್ಕರ ಮತ್ತು ಅತ್ತಿಗೆ ಸಂತೋಷದಿಂದಲೇ ಬರಮಾಡಿಕೊಂಡರು. ‘ಏನೋ ಹೀರೊ’ ಅಂತ ವೀರುವನ್ನು ಎತ್ತಿಕೊಂಡು ಕೆನ್ನೆ ಹಿಂಡಿದ ಮಾವನ ಪ್ರೀತಿಗೆ ಪ್ರತಿಕ್ರಿಯಿಸದೆ ವೀರೂ ಸಪ್ಪಗೇ ಇದ್ದದ್ದನ್ನು ಭಾಸ್ಕರ ಕಂಡು, ‘ಯಾಕೋ ವೀರೂ... ಹೊಟ್ಟೆ ಹಸಿತಾ ಇದೆಯಾ? ಹೋಗಿ ಕೈಕಾಲು ತೊಳೆದುಕೊಂಡು ಬಾ, ವಾರಿಜ ನೀನೂ ಕೈಕಾಲು ತೊಳೆದುಕೊಂಡು ಬಾ, ನಿಮ್ಮ ಅತ್ತಿಗೆ ನೀನು ಬರ್ತಾ ಇದ್ದೀಯಾ ಅಂತ ಬಿಸಿಬೇಳೆಬಾತ್ ಮಾಡಿದ್ದಾಳೆ. ನಿನಗೆ ಇಷ್ಟ ಅಲ್ಲವಾ?’ ಅಂತ ತಿಂಡಿ ತಿನ್ನಲು ಬಲವಂತ ಮಾಡಿದ. ಅಣ್ಣನ ಬಲವಂತಕ್ಕೆ ಮೇಲೆದ್ದ ವಾರಿಜ ವೀರುವನ್ನು ಕರೆದುಕೊಂಡು ಬಚ್ಚಲಮನೆಗೆ ಹೋಗಿ ವೀರುವಿಗೂ ಕೈಕಾಲು ತೊಳೆಯಲು ಹೇಳಿ ತಾನೂ ತೊಳೆದುಕೊಂಡು ಬಂದಳು. ಅಷ್ಟರಲ್ಲಿ ಸುಧಾ ಟೇಬಲ್ ಮೇಲೆ ಎರಡು ತಟ್ಟೆ ಇರಿಸಿ ಇಬ್ಬರಿಗೂ ತಿಂಡಿ ಬಡಿಸಿದಳು. ವೀರುವಿಗಂತೂ ತುಂಬಾ ಹೊಟ್ಟೆ ಹಸಿದಿತ್ತೇನೊ, ಗಬಗಬನೇ ತಿನ್ನುತ್ತಿರುವುದನ್ನು ನೋಡಿ ದುಃಖ ಉಮ್ಮಳಿಸಿತು. ಅಣ್ಣ ಅತ್ತಿಗೆಗೆ ಗೊತ್ತಾಗಬಾರದೆಂದು ತಡೆದುಕೊಂಡಳು. ಇಬ್ಬರದ್ದು ತಿಂಡಿ ತಿಂದಾದ ನಂತರ ಸುಧಾ, ‘ಬಾರೋ ವೀರೂ, ಮಹಡಿ ಮೇಲೆ ಅಣ್ಣಂದಿರದ್ದು ಆಟದ ಸಾಮಾನು ಇದೆ, ಆಟವಾಡುವಂತೆ’ ಅಂತ ಕರೆದುಕೊಂಡು ಹೋದಳು. ಭಾಸ್ಕರ ತಂಗಿಯತ್ತ ನೋಡುತ್ತಾ, ‘ವಾರಿ ಮಲಗಿಕೊಳ್ತೀಯಾ’ ಅಂತ ಕೇಳಿದ. ‘ಇಲ್ಲ ಅಣ್ಣ’ ಅಂತ ಕುತ್ತಿಗೆ ಆಡಿಸಿದಳು. ತಂಗಿಯೇ ಮೊದಲು ಶುರು ಮಾಡಲಿ ಅಂತ ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಂಡ. ತಂಗಿ ಬರುತ್ತಾಳೆ ಅಂತಾನೇ ಇವತ್ತು ಕಚೇರಿಗೆ ಹೋಗದೆ ರಜೆ ಹಾಕಿದ್ದ. ವಾರಿಜ ರಾತ್ರಿ ಅಷ್ಟು ಹೊತ್ತಿನಲ್ಲಿ, ನಾಳೆ ವೀರೂನಾ ಕರ್ಕೊಂಡು ಬರ್ತಾ ಇದ್ದೀನಿ ಅಂತ ಫೋನ್ ಮಾಡಿದಾಗ ಆತಂಕವಾದರೂ ಯಾಕೆ, ಏನು, ಎತ್ತ ಎಂದು ಏನೂ ಕೇಳದೆ ಬಾ ಅಂತ ಹೇಳಿ ಫೋನು ಇಟ್ಟಿದ್ದ.

‘ಅಣ್ಣ, ವೀರುನಾ ಮನೆಯಿಂದ ಕರೆದುಕೊಂಡು ಬಂದಿರುವುದು ಮನೆಯಲ್ಲಿ ಯಾರಿಗೂ ಇಷ್ಟವಿಲ್ಲ, ಇವನಂದ್ರೆ ಮನೆಯಲ್ಲಿ ಎಲ್ಲರಿಗೂ ತುಂಬಾ ಪ್ರೀತಿ. ಅವರೆಲ್ಲರಿಗೂ ನನ್ನ ಮೇಲೆ ತುಂಬಾ ಕೋಪ. ಆದ್ರೆ ಏನು ಮಾಡಲಿ ಅಣ್ಣ? ಅವರ ಮುದ್ದು ವೀರುವನ್ನು ಎಲ್ಲಿ ಹಾಳು ಮಾಡುತ್ತೊ ಅಂತ ನಂಗೆ ಭಯ ಅಣ್ಣ. ಇಡೀ ಮನೆಗೆ ಒಬ್ಬನೇ ಗಂಡು ಮಗ, ಭಾವ ಅಂತೂ ವೀರೂನೇ ಸರ್ವಸ್ವ ಅಂತ ಅವನು ಏನೂ ಮಾಡಿದರೂ ತಲೆ ಮೇಲೆ ಕೂರಿಸಿಕೊಂಡು ಮೆರೆಸುತ್ತಾರೆ. ಅಕ್ಕನಿಗೂ ವೀರೂ ಮೇಲೆ ಪ್ರಾಣ, ಇನ್ನು ನಿಮ್ಮ ಭಾವನಿಗಂತೂ ಅವನು ಏನು ಮಾಡಿದರೂ ಚಂದ, ವೀರುವಿಗೆ ಸರಿ ಯಾವುದು, ತಪ್ಪು ಯಾವುದು ಅಂತ ಮನೆಯವರು ಯಾರೂ ಅರ್ಥನೇ ಮಾಡಿಸಲ್ಲ. ನನಗೂ ಅರ್ಥ ಮಾಡಿಸೋಕೆ ಬಿಡಲ್ಲ. ಇವನಿಂದಲೇ ಅವರುಗಳ ಜೊತೆ ತುಂಬಾ ಸಲ ಜಗಳ ಮಾಡಿಕೊಂಡಿದ್ದೇನೆ. ವೀರೂನೂ ದೊಡ್ಡವನಾಗ್ತಾ ಇದ್ದಾನೆ. ಇದು ಹೀಗೇ ಬಿಟ್ಟರೆ ವೀರೂ ಬದುಕು ಎಲ್ಲಿ ಹೇಗೇಗೋ ಆಗಿ ಬಿಡುತ್ತೇನೊ ಅಂತ ಹೆದರಿ ಮನೆಯವರ ವಿರುದ್ಧ ಕಟ್ಟಿಕೊಂಡು ವೀರೂವನ್ನು ಇಲ್ಲಿಗೆ ಕರೆದುಕೊಂಡು ಬಂದು ಬಿಟ್ಟೆ. ಅವರ ಕೋಪವನ್ನು ಹೇಗಾದರೂ ಸಹಿಸಿಕೊಳ್ಳುವೆ, ಆದರೆ ವೀರು ಹಾಳಾಗೋಗೊದನ್ನ ನಾನು ಸಹಿಸಲಾರೆ ಅಣ್ಣ’ ಎಂದು ನೋವು ತಡೆಯಲಾರದೆ ಅತ್ತೇಬಿಟ್ಟಳು.

ತಂಗಿಯೆಂದರೆ ಭಾಸ್ಕರನಿಗೆ ಅತಿಶಯ ಪ್ರೀತಿ. ಒಬ್ಬಳೇ ತಂಗಿ ಶ್ರೀಮಂತರ ಮನೆ ಸೇರಿ ಸುಖವಾಗಿ ಇದ್ದಾಳೆ ಅಂತಾನೆ ಭಾವಿಸಿದ್ದ. ತಂದೆ ತಾಯಿ ಇಲ್ಲದ ವಾರಿಜಳಿಗೆ ಭಾಸ್ಕರನೇ ತಂದೆ ತಾಯಿಯಾಗಿ ಮಮತೆ, ವಾತ್ಸಲ್ಯದಿಂದ ಪ್ರೀತಿಯ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದ. ಪ್ರೀತಿಯ ತಂಗಿ ಒಳ್ಳೆಯಮನೆ ಸೇರಿದ್ದಾಳೆ. ಅವಳ ದುಡುಕು, ಕೋಪ ಎಲ್ಲವನ್ನೂ ಸಹಿಸಿಕೊಂಡು ಸುಖವಾಗಿ ಮಾದು ಮತ್ತು ಅವನ ಮನೆಯವರು ನೋಡಿಕೊಳ್ಳುತ್ತಿದ್ದಾರೆ ಅನ್ನುವುದನ್ನು ಅವನು ತಂಗಿಯ ಮನೆಗೆ ಬಂದಾಗಲೆಲ್ಲ ಖುದ್ದಾಗಿ ನೋಡಿದ್ದ. ಇದು ಅವನಿಗೆ ಸಮಾಧಾನ ಮತ್ತು ನೆಮ್ಮದಿ ತರಿಸಿತ್ತು. ಆದರೆ ವಾರಿಜಳ ಕಣ್ಣೀರು, ನೋವು ಈಗ ಅವನನ್ನು ಧೃತಿಗೆಡಿಸಿತು. ರಾತ್ರಿ ವಾರಿಜಳ ಫೋನ್ ಬಂದಾಗಿನಿಂದಲೂ ಚಿಂತೆಯಲ್ಲಿ ಇಡೀ ರಾತ್ರಿ ಕಳೆದಿದ್ದು. ಈಗ ಪ್ರೀತಿಯ ತಂಗಿಯ ಕಣ್ಣೀರು ಕಂಗೆಡಿಸಿತ್ತು.

‘ವಾರೀ, ಇದ್ಯಾವ ದೊಡ್ಡ ವಿಷಯ ಅಂತ ಹೀಗೆ ದುಃಖಿಸ್ತಾ ಇದ್ದೀಯಲ್ಲ. ನಿಮ್ಮ ಮನೆಯವರೆಲ್ಲ ದೇವರಂಥವರು, ಅವರಿಗೆ ಕೆಟ್ಟತನ ಅನ್ನೋದೇ ಗೊತ್ತಿಲ್ಲ. ಅವರಿಗೆ ಬರೀ ಪ್ರೀತಿಸುವುದು ಮಾತ್ರ ಗೊತ್ತು. ದ್ವೇಷ, ಅಸೂಯೆ ಇವೆಲ್ಲ ಗೊತ್ತೇ ಇಲ್ಲದ ಜನ, ವೀರೂವನ್ನು ಮಾತ್ರ ಅವರು ಪ್ರೀತಿಸೋಲ್ಲ, ಆ ಮನೆಯ ಎಲ್ಲಾ ಮಕ್ಕಳನ್ನೂ ಪ್ರೀತಿ ಪ್ರೇಮದಿಂದ ನೋಡಿಕೊಳ್ಳುತ್ತಾ ಇದ್ದಾರೆ. ವೀರೂ ಸಣ್ಣವನು ಅಂತ ಎಲ್ಲರೂ ತುಂಬಾ ಹಚ್ಚಿಕೊಂಡಿದ್ದಾರೆ ಅಷ್ಟೆ’.

‘ಈಗೇನು ವೀರೂನಾ ಇಲ್ಲೆ ಓದಿಸಬೇಕು ತಾನೆ? ಅವನು ನನಗೆ ಬೇರೆಯವನಾ? ತರುಣ್ ಮತ್ತು ವರುಣ್ ಜೊತೆ ಅವನೂ ನನ್ನ ಮಗನೇ. ಅವರನ್ನು ಹೇಗೆ ಶಿಸ್ತಿನಿಂದ ಬೆಳೆಸುತ್ತಿದ್ದೇನೊ ವೀರೂನನ್ನು ಹಾಗೇ ಬೆಳೆಸುವೆ, ಅವನು ಚೆನ್ನಾಗಿ ಓದಿ ಡಾಕ್ಟರ್ ಆಗಬೇಕು ಅಲ್ವಾ. ಅದನ್ನೆಲ್ಲ ನನಗೆ ಬಿಡು’ ತಂಗಿಗೆ ಮಾತು ಕೊಟ್ಟು ಧೈರ್ಯ ತುಂಬಿದ. ಅಣ್ಣನ ಭರವಸೆ ಅವಳಲ್ಲಿನ ದುಗುಡ, ಸಂಕಟ, ನೋವನ್ನೆಲ್ಲ ದೂರ ಮಾಡಿ ಅಲ್ಲಿ ನೆಮ್ಮದಿ, ಸಮಾಧಾನ ಮೂಡುವಂತೆ ಮಾಡಿತು.

‘ಅಣ್ಣ, ನೀನು ಇದನ್ನು ಮಾಡ್ತೀಯಾ ಅಂತ ಗೊತ್ತಿತ್ತು. ಅದೇ ಧೈರ್ಯದ ಮೇಲೆ ಮನೆಯವರನ್ನು ಎದಿರು ಹಾಕಿಕೊಂಡು ಬಂದು ಬಿಟ್ಟೆ, ಇನ್ನು ವೀರೂ ಜವಾಬ್ದಾರಿ ನಿನ್ನದೆ, ‘ಹಾಲಲ್ಲಾದರೂ ಹಾಕು, ನೀರಲ್ಲಾದರೂ ಹಾಕು’, ಈಗ ನಾನು ನೆಮ್ಮದಿಯಿಂದ ಊರಿಗೆ ಹೋಗುತ್ತೇನೆ’ ಅಣ್ಣನ ಕೈಹಿಡಿದು ಹೇಳಿದಳು.

ತಂಗಿಯ ತಲೆ ನೇವರಿಸುತ್ತಾ ‘ಊರಿಗೆ ಹೋಗೋ ಮಾತು ಈಗ್ಲೇ ಯಾಕೆ? ನೀನು ನೆಮ್ಮದಿಯಿಂದ ನಾಲ್ಕು ದಿನ ತೌರುಮನೆಯಲ್ಲಿ ಇರು. ಅಪರೂಪಕ್ಕೆ ಬಂದಿದ್ದೀಯ, ನಿನಗೇನೇನು

## ಕಳೆದ ಸಂಚಿಕೆಯಲ್ಲಿ



ಗಾಯಗೊಂಡ ವೀರುವನ್ನು ಶಾಂಭವಿ ಮತ್ತು ಮಕ್ಕಳು ಸಂತೈಸಿದರು. ಆ ಗಾಯ ಮಾದರೂ ವಾರಿಜಾಳ ಮನಸ್ಸಿಗಾದ ಗಾಯ ಹಸಿಯಾಗಿಯೇ ಇತ್ತು. ಅಷ್ಟರಲ್ಲಿ ಊರನ್ನು ಸಾವಿನ ಸೂತಕ ಆವರಿಸಿಕೊಂಡಿತು. ಮದುವೆ ನಿಶ್ಚಯವಾಗಿದ್ದ ನಾಟಕದ ಹುಡುಗ ಗಜಾನನ ಇದ್ದಕ್ಕಿದ್ದಂತೆ ಆತ್ಮಹತ್ಯೆ ಮಾಡಿಕೊಂಡಿದ್ದ. ಅವನ ಸಾವಿಗೆ ಮನೆಯವರಿಗಿಂತಲೂ ಹೆಚ್ಚು ಮರುಗಿದ ರುದ್ರ, ಮರುದಿನ ತಾನೂ ಆತ್ಮಹತ್ಯೆ ಮಾಡಿಕೊಂಡು ಗೆಳೆಯನನ್ನು ಹಿಂಬಾಲಿಸಿದ. ನತದೃಷ್ಟ ಗೆಳೆಯರ ನಡುವಿನ ಸ್ನೇಹದ ಬಗ್ಗೆ ಊರು ಮೆಚ್ಚುಗೆಯ ಮಾತು ಆಡುತ್ತಿರುವಾಗ, ಸ್ನೇಹದ ಸತ್ಯ ಹೊರಬಂತು. ಗೆಳೆಯರಿಬ್ಬರೂ ಗಂಡಹೆಂಡಿರಂತೆ ಒಟ್ಟಿಗೆ ಬಾಳಲು ನಿರ್ಧರಿಸಿದ್ದರು. ತಮ್ಮ ಇಚ್ಛೆಗೆ ಸಮಾಜ ಒಪ್ಪುವುದಿಲ್ಲವೆಂದು ತಿಳಿದು ನಿರಾಶರಾಗಿದ್ದರು. ಮನೆಯಲ್ಲಿ ಮದುವೆ ನಿಶ್ಚಯವಾದಾಗ, ಗಜಾನನ ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದ. ಈ ವಿಷಯ ತಿಳಿದ ನಂತರ ವಾರಿಜಾಳ ತಳಮಳ ಮತ್ತೂ ಹೆಚ್ಚಾಯಿತು. ಮಗ ಹೆಣ್ಣಿಗನಂತೆ ಆಡುವುದನ್ನು ನೋಡಿ ತಾಯಿ ಹೃದಯ ನೋವಿನಿಂದ ಚೀರತೊಡಗಿತು. ಆದರೆ, ಅಮ್ಮನ ತಕರಾರನ್ನು ಲೆಕ್ಕಿಸದೆ, ವೀರುವಿನೊಳಗಿನ ಹೆಣ್ತನದ ಭಾವನೆಗಳು ಬಲಿಯತೊಡಗಿದವು.